ಶ್ರೀ ರಮೇಶ್. ಸಿ. ಜಿಗಜಿಣಗಿ : ಮಾನ್ಯ ಅಧ್ಯಕ್ಷರೆ, ಮಳೆ ಜಾಸ್ತಿಯಾಗಿ ಯಾರದೋ ಜೀವದ ಹಾನಿಯಾಗಿದೆ ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ದಯಮಾಡಿ ತಾವು ತಪ್ಪು ತಿಳಿದುಕೊಳ್ಳಬಾರದು, ತಾವು ಸರಿಯಾಗಿ ಕೇಳಬೇಕು.

ಶ್ರೀ ರಮೇಶ್ ಸಿ. ಜಿಗಜಿಣಗಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಶೂನ್ಯವೇಳೆಯಲ್ಲೇನು ವಿಚಾರವನ್ನು ಸರ್ಕಾರದ ಗಮನಕ್ಕೆ ತಂದಿದ್ದಾರೆ ಅದರ ಬಗ್ಗೆ ಸಂಪೂರ್ಣವಾದ ಮಾಹಿತಿಯನ್ನು ಸಂಬಂಧಪಟ್ಟ ಅಧಿಕಾರಿಗಳಿಂದ ತರಿಸಿ ಅದಕ್ಕೆ ತೆಗೆದುಕೊಳ್ಳಬೇಕಾಗಿರುವ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳಲು ವ್ಯವಸ್ಥೆ ಮಾಡುತ್ತೇನೆ.

ಅಧ್ಯಕ್ಷರು : ಅವರು ಅಪರೂಪಕ್ಕೆ ಇಲ್ಲಿ ಎದ್ದು ಮಾತನಾಡುತ್ತಾರೆ, ಭಾಷೆಯ ಸಮಸ್ಯೆ ಇರುವುದರಿಂದ ಅವರು ಹೆಚ್ಚು ಮಾತನಾಡುವುದಿಲ್ಲ. ಅವರು ಬಹಳ ನೋವಿನಿಂದ ಹೇಳಿದ್ದಾರೆ. ತಾವು ದಯಮಾಡಿ ಅವರ ಪಕ್ಕದಲ್ಲಿ ಕುಳಿತುಕೊಂಡು ಅವರ ಸಮಸ್ಯೆಯನ್ನು ತಿಳಿದುಕೊಂಡು ಅದನ್ನು ಬಗೆಹರಿಸಿಕೊಡಿ.

ಶ್ರೀ ರಮೇಶ್ ಸಿ. ಜಿಗಜಿಣಗಿ : ಆಗಲಿ ಮಾಡುತ್ತೇನೆ. We will give all respect to the member and to the Chair.

ಕರಾವಳಿಯ ಐದಾರೂ ಭಾಗಗಳಲ್ಲಿ ಬಾರ್ಜ್‌ಮೌಂಟ್ ಘಟಕಗಳಿಂದ ತ್ಯಾಜ್ಯ ಬಿಡುಗಡೆಯಾಗುತ್ತಿದ್ದು ಮೀನುಗಳಿಗೆ ತೊಂದರೆಯಾಗಿರುವುದು.

ಶ್ರೀ ಕೆ. ಜಯರಾಮಶೆಟ್ಟಿ (ಉಳ್ಳಾಲ) : ಮಾನ್ಯ ಅಧ್ಯಕ್ಷರೆ, ಕರಾವಳಿಯ ಐದಾರೂ ಭಾಗಗಳಲ್ಲಿ ಬಾರ್ಜ್‌ಮೌಂಟ್ ವಿದ್ಯುತ್ ಕೇಂದ್ರಗಳನ್ನು ಸ್ಥಾಪನೆ ಮಾಡುವ ಬಗ್ಗೆ ಸರ್ಕಾರ ಹೇಳಿಕೆ ಕೊಟ್ಟಿತ್ತು. ಅದರಲ್ಲಿ ನನ್ನ ಕ್ಷೇತ್ರದ ಬೆಂಗೇರೆ ಎಂಬ ಕಡೆ ಸಹ ಮಾಡುವುದಿತ್ತು. ಬೆಂಗೇರೆ ಸೆಮಾರು ಹನ್ನೆರಡು ಸಾವಿರ ಜನಸಂಖ್ಯೆ ಇರುವ ಪ್ರದೇಶ. ಅವರುಗಳಲ್ಲಿ 90 ಭಾಗ ಜನರು ಮೀನುಗಾರಿಕೆಯನ್ನೇ ಅವಲಂಬಿಸಿದ್ದಾರೆ. ನನ್ನ ಕ್ಷೇತ್ರದ ಬೆಂಗೇರೆ ಮತ್ತು ತಣ್ಣೀರು ಬಾವಿ ಕೇವಲ ಒಂದು ಕಿಲೋಮೀಟರ್ ಅಂತರದಲ್ಲಿದೆ. ಈ ಎರಡೂ ಕಡೆಗಳಲ್ಲಿ ಬಾರ್ಜ್‌ಮೌಂಟ್ ವಿದ್ಯುತ್ ಕೇಂದ್ರ ಸ್ಥಾಪನೆ ಮಾಡುವ ವ್ಯವಸ್ಥೆಯನ್ನು ಸರ್ಕಾರ ಮಾಡುತ್ತಿದೆಯೆಂದು ಇತ್ತೀಚೆಗೆ ತಿಳಿದುಬಂದಿರುತ್ತದೆ. ಇದಕ್ಕೆ ಬಹಳಷ್ಟು ವಿರೋಧ ಬಂದಿದೆ. ಈ ಬಾರ್ಜ್‌ಮೌಂಟೆಡ್ ಘಟಕಗಳಿಂದ ತ್ಯಾಜ್ಯವು ಬಿಡುಗಡೆಯಾಗುತ್ತದೆ, ಅದು ನೀರಿನಲ್ಲಿ ತೇಲುತ್ತದೆ, ಮೀನುಗಳಿಗೆ ತೊಂದರೆಯಾಗುತ್ತದೆ. ನನ್ನ ಕ್ಷೇತ್ರದಲ್ಲೇ ಇದನ್ನು ಎರಡು ಕಡೆ ಮಾಡುತ್ತಿದ್ದಾರೆ. ಬಾರ್ಜ್‌ಮೌಂಟೆಡ್ ಬಗ್ಗೆ ಮಾತನಾಡುವುದಕ್ಕಿಂತ ಹೆಚ್ಚಾಗಿ ಅಕಾಲಿಕವಾಗಿ ಕೇವಲ ಎರಡು ತಿಂಗಳ ಹಿಂದೆ ಒಂದು ಕಿಲೋಮೀಟರ್ ವ್ಯಾಪ್ತಿಯಲ್ಲಿ ಎರಡು ಕೇಂದ್ರಗಳನ್ನು ಮಾಡಿಕೊಂಡಿದ್ದಾರೆ. ಇದರಿಂದ ಮೀನುಗಾರಿಕೆಗೆ ತೀವ್ರವಾದ ತೊಂದರೆಯಾಗುತ್ತಿದೆ. ಶಬ್ಧಮಾಲಿನ್ಯವಾಗುತ್ತಿದೆ. ಜನಜೀವನ ಅವ್ಯವಸ್ಥೆ ಮಾಡುತ್ತಿದ್ದಾರೆ. ಇದರ ಬಗ್ಗೆ ನನಗೆ ಸ್ಪಷ್ಟೀಕರಣ ಮಾಡಬೇಕಾಗಿದೆ.

ಶ್ರೀ ಆರ್. ವಿ. ದೇಶಪಾಂಡೆ (ಕೈಗಾರಿಕಾ ಸಚಿವರು) : ಮಾನ್ಯ ಅಧ್ಯಕ್ಷರೆ, ಇವೊತ್ತು ವಿದ್ಯುತ್‌ನ ಕೊರತೆಯಿಂದಾಗಿ ಕೈಗಾರಿಕೆ ಮತ್ತು ಕೃಷಿ ತೊಂದರೆಯಲ್ಲಿದೆ. ಆದ್ದರಿಂದ ನಾಲ್ಕು ಬಾರ್ಜ್‌ಮೌಂಟೆಡ್ ಪವರ್‌ಪ್ಲಾಂಟ್ಸ್‌ಗೆ ಸರ್ಕಾರ ಈಗಾಗಲೇ ಮನ್ನಣೆ ಕೊಟ್ಟಿದೆ. ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ ಜಿಲ್ಲೆಯಲ್ಲಿ ಅದು ಬರುತ್ತದೆ. 600 ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆ ಮಾಡಬೇಕು ಎಂಬುದು ಇದರ ಉದ್ದೇಶ. ಅದಕ್ಕೆ ಮೊನ್ನೆಯ ಕ್ಯಾಬಿನೆಟ್‌ನಲ್ಲಿ ಪಿ.ಪಿ.ಎಸ್.ಗೆ ಮಂಜೂರಾತಿ ಕೊಟ್ಟಿದ್ದೇವೆ. ಮಾನ್ಯ ಸದಸ್ಯರು ಇದರಿಂದ ಮೀನುಗಾರಿಕೆಗೆ ಪರಿಣಾಮ ಬೀರುತ್ತದೆಂದು ಹೇಳುತ್ತಿದ್ದಾರೆ. ಆದರೆ ಅವರು ಎಲ್ಲಾ ಕಡೆ ಕ್ಲಿಯರೆನ್ಸ್ ಕೊಡುವುದಕ್ಕಿಂತ ಮೊದಲು ಅವರು ಎನ್‌ವಿರಾನ್‌ಮೆಂಟ್ ಮತ್ತು ಎಕಾಲಜಿ ಇಲಾಖೆಯಿಂದ ಕ್ಲಿಯರೆನ್ಸ್ ತೆಗೆದುಕೊಳ್ಳಬೇಕಾಗುತ್ತದೆ. Without those clearances the project cannot take off. ಆದ್ದರಿಂದ, ಮಾನ್ಯ ಸದಸ್ಯರು ಅದರ ಬಗ್ಗೆ ಸಂದೇಹ ಪಡುವ ಅವಶ್ಯಕತೆ ಇಲ್ಲ. ಸದಸ್ಯರೇನು ಮೀನುಗಾರಿಕೆಯ ಬಗ್ಗೆ ಹೇಳಿದ್ದಾರೆ ಅದರ ಬಗ್ಗೆ ಪರಿಶೀಲನೆ ಮಾಡಿ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆ.

ಶ್ರೀ ಕೆ. ಜಯರಾಮ ಶೆಟ್ಟಿ : ಅಧ್ಯಕ್ಷರೆ, ತಾವು ಬೆಂಗೇರೆ ಮತ್ತು ತಣ್ಣೀರ್ ಬಾವಿ ಎರಡೂ ಕಡೆ ತಾವು ಅದನ್ನು ಮಾಡುವ ಉದ್ದೇಶವಿದೆಯೇ? ಕೇವಲ ಒಂದು ಕಿಲೋಮೀಟರ್ ಒಳಗಡೆಯೋ ಎರಡು ಕೇಂದ್ರಕ್ಕೆ ತಾವು ಪ್ರಪೋಸ್ ಮಾಡಿದ್ದೀರಾ?ಆ ವಿಚಾರ ತಮ್ಮ ಗಮನಕ್ಕೆ ಬಂದಿದೆಯೇ? ಅಥವಾ ಅದು ಕೇವಲ ವದಂತಿಯೇ? ಒಂದು ಕಿಲೋಮೀಟರ್‌ನೊಳಗೆ ಎರಡು ಕೇಂದ್ರಗಳನ್ನು ಮಾಡಲು ಬರುವುದಿಲ್ಲ. ತಾವು ಅದಕ್ಕೆ ಹೇಗೆ ಟೆಂಡರ್ ಕರೆದಿದ್ದೀರಿ? ಹೇಗೆ ಅವಕಾಶ ಕೊಟ್ಟಿದ್ದೀರಿ?

ಶ್ರೀ ಆರ್. ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೆ, Location I am not able to see. I will inform him.

ಪುತ್ತೂರು ತಾಲ್ಲೂಕು ಬೆಳ್ತಂಗಡಿಯ ನಿವಾಸಿ ಹರೀಶ್ ರೈ ಅಲಿಯಾಸ್ ಪುಟ್ಟೋಡಿ ಎಂಬುವವರು ಮೇ 19ರಂದು ನಿಗೂಢವಾಗಿ ಕಣ್ಮರೆಯಾಗಿರುವುದು.

ಶ್ರೀ ಡಿ. ವಿ. ಸದಾನಂದಗೌಡ (ಪುತ್ತೂರು) : ಮಾನ್ಯ ಅಧ್ಯಕ್ಷರೆ, ಪುತ್ತೂರು ತಾಲ್ಲೂಕಿನ ಬೆಳ್ತಂಗಡಿಯ ನಿವಾಸಿ, ಬೆಂಗಳೂರಿನ ಆರ್ಥಿಕ ಸಂಸ್ಥೆಯಲ್ಲಿ ಇದ್ದಂಥ ಹರೀಶ್ ರೈ ಅಲಿಯಾಸ್ ಪುಟ್ಟೋಡಿ ಎನ್ನತಕ್ಕವರು ಮೇ 19ರಂದು ನಿಗೂಢವಾಗಿ ಕಣ್ಮರೆಯಾಗಿರುತ್ತಾರೆ. ಆ ವ್ಯಕ್ತಿಯ ಕೊಲೆಯಾಗಿರುವ ಬಗ್ಗೆ ವದಂತಿ ಹಬ್ಬಿರುತ್ತದೆ. ಈಗಾಗಲೇ ಇದಕ್ಕೆ ಸಂಬಂಧಪಟ್ಟ ಆರೋಪಿಗಳ ತೋಟದಲ್ಲಿ ಎಲುಬಿನ ಚೂರುಗಳನ್ನು ಸಹ ತೆಗೆಯಲಾಗಿದೆ. ಎರಡು ದಿನಗಳ ನಂತರ ಆ ವ್ಯಕ್ತಿಯ ತಾಯಿ ಸುಂದರ್‌ರೈ ಎಂಬುವವರು ಪೋಲೀಸರಿಗೆ ದೂರನ್ನು ನೀಡಿದರು. ಇದರ ಹಿನ್ನೆಲೆ ಏನೆಂದರೆ, ಅವರ ಪ್ರೇಯಸಿಯವರ ಫೋನ್ ಕರೆಯ ಮೇರೆಗೆ ಅವರು ಬೆಂಗಳೂರಿನಿಂದ ದಿವಾಕರ್ ರೈ ಎಂಬುವವರ ಜೊತೆ ಹೋಗಿದ್ದರು, ದಿವಾಕರ್‌ರೈ ಉಪ್ಪಿನಂಗಡಿಯಲ್ಲಿ ಇಳಿದರು, ಇವರು ಮಂಗಳೂರಿಗೆ ಹೋದರು. ಮಂಗಳೂರಿನಿಂದ ಇವರು ನಿಗೂಢ ರೀತಿಯಲ್ಲಿ ಕಣ್ಮರೆಯಾಗಿದ್ದಾರೆ.